**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :128 ಫ್ರಾ.ಸಾ. : 59**

ಸಾಕ್ಷಿಯ ಹೆಸರು : ಜಿ ಎನ್ ಬಸವರಾಜು
ತಂದೆಯ ಹೆಸರು : ಲೇಟ್ ನಿಂಗೆಗೌಡ
ವಯಸ್ಸು : 67 ವರ್ಷ
ಉದ್ಯೋಗ : ನಿವೃತ್ತ ಅಧಿಕಾರಿ.
ವಾಸ : ಮೈಸೂರು.

**ದಿನಾಂಕಃ 24-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ-**

1. ನಾನು ದಿನಾಂಕ 09.05.2005 ರಿಂದ 20.07.2006 ರವರೆಗೆ ಸಿದ್ದಾಪುರದ ತಹಶೀಲ್ದಾರ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷರ ಮಾಹಿತಿ ನೀಡುವಂತೆ ದಿನಾಂಕ 14.09.2005 ರಂದು ಕರ್ನಾಟಕ ಲೋಕಾಯುಕ್ತ ಕಾರವಾರದ ಆರಕ್ಷಕ ನಿರೀಕ್ಷಕರಿಂದ ಪತ್ರ ಬಂದಿತ್ತು. ಈಗ ಆ ಪತ್ರ ನೋಡಿರುತ್ತೇನೆ. ಅದನ್ನು ನಿಪಿ-87 ಎಂದು ಗುರುತಿಸಲಾಯಿತು. ಆ ಬಗ್ಗೆ ನಾನು 2001 ರಿಂದ ಅಲ್ಲಿಯವರೆಗೆ ಇದ್ದ ಸದರಿ ಗ್ರಾಮ ಪಂಚಾಯತಿಯ ಅಧ್ಯಕ್ಷರ ವಿವರವನ್ನು ನೀಡಿರುತ್ತೇನೆ. ನಾನು ನೀಡಿದ ಮಾಹಿತಿಯನ್ನು ಈಗ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪತ್ರವನ್ನು ನಿಪಿ-87/1 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-87/1(ಎ) ಎಂದು ಗುರುತಿಸಲಾಯಿತು. ಅದರಲ್ಲಿ 1 ನೇ ಆರೋಪಿ ದಿನಾಂಕ 17.12.2002 ರಿಂದ ಅಧ್ಯಕ್ಷರು ಆಗಿದ್ದ ಬಗ್ಗೆ ಮಾಹಿತಿ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

ಏನೂ ಇಲ್ಲ ಎಂದು ಹೇಳಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ